A.—Sri B. D. JATTI (Minister for Finance) [on behalf of Sri S. Nijalingappa (Chief Minister)].—

(*a*) Yes.

(*b*) No.

(*c*) Will be examined after the Project is sanctioned.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಹಾಗಿದ್ದಲ್ಲಿ ಚೆಂಡರನ್ನು ಸರಕಾರದವರು ಆಂಗೀಕರಿಸಿರುವರೆ ಎಂದು ಕೇಳಿದ (ಅ) ಪ್ರಶ್ನೆಗೆ ಇಲ್ಲ ಎಂದು ಉತ್ತರ ಹೇಳಿದೆ. ಇದಕ್ಕೆ ಕಾರಣವೇನು ಸ್ವಾಮಿ ?

ಶ್ರೀ ಬಿ. ಡಿ. ಜತ್ತಿ.—ಈ ಪ್ರೊಜೆಕ್ಟ್ ರಿವೈಜ್ ಮಾಡತಕ್ಕದ್ದೆಂದು ಅದನ್ನು ರಿಜೆಕ್ಟ್ ಮಾಡಿದೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ವಾಮಿ, ಈ ಯೋಜನೆ ಪುಂಜೂರು ಆಗುವುದಕ್ಕೆ ಮುಂಚಿತವಾಗಿ ಮನೆಗಳನ್ನು ಕಟ್ಟುವುದಕ್ಕೋಸ್ಕರ ಚೆಂಡರ್ ಕರೆದಿದ್ದರು. ಮುಂಚಿತವಾಗಿ ಚೆಂಡರ್ ಕರೆಯಿಸುವ ಪ್ರಮೇಯವೇನಿತ್ತು ?

ಶ್ರೀ ಬಿ. ಡಿ. ಜತ್ತಿ.—ಈ ಪ್ರೊಜೆಕ್ಟು ಮೊದಲನೇ ಪಂಚವಾರ್ಷಿಕ ಯೋಜನೆಯಲ್ಲಿ ಇತ್ತು. ಎರಡನೇ ಯೋಜನೆಯಲ್ಲಿ ಸಹ ಇದ್ದಿತು. ಈಗಿನ ಮೂರನೆ ಯೋಜನೆಯಲ್ಲಿ ಸಹ ಇದೆ. ಇದನ್ನು ರಿವೈಜ್ ಮಾಡಬೇಕಾದುದರಿಂದ ಎಷ್ಟು ಹಣ ಬೇಕು ಎನ್ನುವುದನ್ನು ಯೋಚನೆ ಮಾಡಿ ನರಿಹೋಗುವಂತೆ ಮಾಡಬೇಕಾಗಿದೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ರಿವೈಜ್ ಎಸ್ಟಿಮೇಟ್ ಎಷ್ಟು ಆಗಿದೆ ?

ಶ್ರೀ ಬಿ. ಡಿ. ಜತ್ತಿ.—ರಿವೈಜ್ ಎಸ್ಟಿಮೇಟು 145 ಲಕ್ಷ ಇದೆ.

ಶ್ರೀ ಎನ್. ಎಂ. ಕೃಷ್ಣ.—ಚೆಂಡರ್ ಕರೆದ ತಾರೀಖು ತಿಳಿಸಲು ಸಾಧ್ಯವಿದೆಯೇ ?

Sri B. D. JATTI.—I have no date.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಒಂದು, ಎರಡು, ಮೂರು, ನಾಲ್ಕು, ಐದು ಯೋಜನೆಗಳು ಹೀಗೆ ಎಷ್ಟೋ ಯೋಜನೆಗಳು ಮುಗಿದರೂ ಕೂಡ ಪ್ಲಾನಿನಲ್ಲಿ ಈ ಪ್ರೊಜೆಕ್ಟು ಉಳಿಯುತ್ತದೆ. ಆದರೆ ತಾವು ಹೆಚ್ಚಾಗಿ ಹಣ ಒದಗಿಸದೇ ಇರುವುದರಿಂದ ಇದನ್ನು ಹೀಗೆಯೇ ಮುಂದುವರಿಸಬೇಕಾಗುತ್ತದಲ್ಲವೇ ? ದಿಲ್ಲಿಗೆ ಎಷ್ಟು ಸಲ ನಿಮ್ಮನ್ನು ಕಳಿಸುತ್ತಿದ್ದೇವೆ ಕೇಂದ್ರದಿಂದ ಹಣ ದೊರಕಿಸುವ ವಿಚಾರವನ್ನು ಮಾಡಿರಿ ?

ಶ್ರೀ ಬಿ. ಡಿ. ಜತ್ತಿ.—ಹಣ ದೊರೆಯುವ ವರೆಗೆ ಮುಂದುವರಿಸಬೇಕಾಗುತ್ತದೆ.

ಶ್ರೀ ಕೆ. ಎಲ್. ಶಿವಲಿಂಗೇಗೌಡ.—ಅದಷ್ಟು ಜಾಗ್ರತೆ ವಂಜೂರು ಮಾಡುತ್ತೀರಾ ?

Sri B. D. JATTI.—Now the technical committee has submitted its report to the Board and the Board has to send its recommendation for approval.

Mr. SPEAKER.—I hold over Question No. 464.

Master Plan for Irrigational works in Kanakapura Taluk.

*Q.—612. Sri S. KARIAPPA (Kanakapura).—

Will the Government be pleased to state :—

(*a*) whether the Master Plan for irrigational works in Kanakpura Taluk has been prepared ;

(*b*) if so, whether it has been finalised ;

(*c*) the classification of these works under different heads such as (i) restoration of tanks, (ii) improvements to tanks, (iii) new pick-ups and new projects (tanks);

(*d*) the estimated cost of these works under each of the above heads ;

(*e*) the problabe date, this Master Plan would be implemented ;

(*f*) the probable period it may take for full achievement ?

A.— Sri ALUR HANUMANTHAPPA (Deputy Minister for Minor Irrigation).—

(*a*) The Master Plan is under preparation.

(*b*), (*c*), (*d*), (*e*) and (*f*) Do not arise in view of reply to clause (*a*) of the Question.

ಶ್ರೀ ಎಸ್. ಕರಿಯಪ್ಪ.—ಈ ಮಾಸ್ಟರ್ ಪ್ಲಾನ್ ತಯಾರ್ಮಾಡಿ 3 ವರ್ಷ ಆಯಿತು ಅಲ್ಲವೇ ? ಇದನ್ನು ಕಾರ್ಯಗತ ಮಾಡಲು ಇನ್ನೂ ಎಷ್ಟು ವರ್ಷ ಬೇಕಾಗುತ್ತದೆ ?

† ಶ್ರೀ ಆಲೂರು ಹನುಮಂತಪ್ಪ.—ಈಗಾಗಲೇ ಡೀಜೇರ್ಡ್ ಇನ್‌ವೆಸ್ಟಿಗೇಶನ್ ಆಗಿ ಪ್ಲಾನ್ ಎಸ್ಟಿಮೇಟು ನ್ಯೂಟಿನಿ ಮಾಡಲಾಗುತ್ತಿದೆ. ಅದಕ್ಕೋಸ್ಕರ ತಡವಾಗಿದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಈ ಮಾಸ್ಟರ್ ಪ್ಲಾನ್ ಕಾರ್ಯಗತಗೊಳಿಸಲು ಯಾವ ಆಧಾರದ ಮೇಲೆ ಎಷ್ಟು ಹಣ ಬರುತ್ತದೆ ಎನ್ನುವುದಕ್ಕೆ ಕೇಂದ್ರ ಸರಕಾರ ಏನಾದರೂ ಆಶ್ವಾಸನೆ ಕೊಟ್ಟಿದ್ದಾರೆಯೇ ?

Mr. SPEAKER.—The Hon'ble Member may put only one question at a time.

ಶ್ರೀ ಕೆ. ಪಿ. ರೇವಣ ಸಿದ್ದಪ್ಪ.—ಈಗ ಈ ಮಾಸ್ಟರ್ ಪ್ಲಾನ್‌ಗೋಸ್ಕರ ಕೇಂದ್ರ ಸರಕಾರದಿಂದ ರಾಜ್ಯ ಸರಕಾರಕ್ಕೆ ಎಷ್ಟು ಹಣ ದೊರಕಬಹುದು ಎನ್ನುವುದನ್ನು ತಿಳಿದುಕೊಂಡು ಎಷ್ಟು ಹಣಕ್ಕೆ ಎಸ್ಟಿಮೇಟು ಮಾಡಬೇಕೆಂದು ಈ ಪ್ಲಾನ್ ತಯಾರ್ಮಾಡಿದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಇಡೀ ದೇಶಕ್ಕೆ ಬೇಕಾದ ಇದೊಂದು ಬೃಹತ್ ಯೋಜನೆ ಯಾಗಿದೆ. ದೇಶದಲ್ಲರುವ ಪೊಟೆನ್‌ಶಿಯಲ್ ಸರ್ಪಸ್ ವಾಟರ್ ಎಷ್ಟು ಇದೆ ಎನ್ನುವುದನ್ನು ನೋಡಿ ಪ್ರೊಜೆಕ್ಟು ಆಗಬೇಕು. ದೇಶದಲ್ಲಿ ಆಗಬೇಕಾದ 16,000 ಕೆಲಸಗಳಿಗೆ 50 ಕೋಟಿ ರೂಪಾಯಿ ಬೇಕು. ಬೃಹತ್ ಯೋಜನೆ ತಯಾರಾಗಿದೆ. ಅದು ಈಗ ಸ್ಕ್ರುಟಿನಿಯಾಗುತ್ತಾ ಇದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಪಾಯಿಂಟ್ ಆಫ್ ಆರ್ಡರ್ ನರ್, ಈ ಯೋಜನೆಗೆ ಹಣ ದೊರೆಯುವ ನಿರೀಕ್ಷಣೆ ಏನು ಇದೆ ? ರಾಜ್ಯ ಸರಕಾರದವರು ಎಷ್ಟು ಕೊಡುತ್ತಾರೆ ? ಕೇಂದ್ರ ಸರಕಾರ ಎಷ್ಟು ಕೊಡುತ್ತಾರೆ ? ಇದೊಂದು ಬೃಹತ್ ಯೋಜನೆ ಎಂದು ಹೇಳುತ್ತಿದ್ದೀರಿ. ಆದುದರಿಂದ ಹಣ ಎಷ್ಟು ಯಾವಾಗ ದೊರಕಿಸಲು ನಿರೀಕ್ಷಣೆ ಮಾಡುತ್ತೀರಿ ?

Mr. SPEAKER.—Under the guise of point of order, he has repeated his supplementary.

ಶ್ರೀ ಎಂ. ವಿ. ಕೃಷ್ಣಪ್ಪ.—ಇದು ಪಾಯಿಂಟ್ ಆಫ್ ಆರ್ಡರ್ ಅಲ್ಲ. ಇದು ಪಾಯಿಂಟ್ ಆಫ್ ಡಿಸಾರ್ಡರ್.

Mr. SPEAKER.—It is bad procedure. If the Member wants a particular answer he must not say he has a point of order.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ನಾವು ಈ ಸಭೆಯಲ್ಲಿ ಎಷ್ಟೋ ಪ್ರಶ್ನೆಗಳನ್ನು ಕೇಳುತ್ತೇವೆ. ನಾವು ಕೇಳುವ ಪ್ರಶ್ನೆಗಳಿಗೆ ತಪ್ಪಿಸಿಕೊಳ್ಳುವ ರೀತಿಯಲ್ಲಿ ಸಚಿವರು ಉತ್ತರ ಕೊಡುತ್ತಾರೆ. ನೇರವಾದ ಉತ್ತರ ಅವರಿಂದ ಬರುವುದಿಲ್ಲ. ಇಂಥ ಸಂದರ್ಭಗಳಲ್ಲಿ ನೇರವಾದ ಉತ್ತರ ಅವರಿಂದ ಬರುವುದಕ್ಕಾಗಿ ತಾವು ದಯವಿಟ್ಟು ನಮ್ಮ ಪ್ರಶ್ನೆಗಳಿಗೆ ಅವಕಾಶ ಕೊಡಬೇಕೆಂದು ತಮ್ಮಲ್ಲಿ ಸೌಜನ್ಯ ದಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

Mr. SPEAKER.—Is that a ground for raising a point of order ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇನ್ನೇನು ಮಾಡುತ್ತೀರಿ, ಸ್ವಾಮಿ !

Mr. SPEAKER.—This kind of behaviour does not bring any credit to anybody, what is all this ? Does the member put a supplementary or cast reflection upon anybody or does he want to enlighten the House ?

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ತಮ್ಮ ಗಮನಕ್ಕೆ ಇದನ್ನು ತರಬೇಕಾಗಿರುವುದಲ್ಲವೇ ?

Mr. SPEAKER.—It is wrong procedure.

Sri H. R. KESHAVA MURTHY.—Are the plans mentioned by you included in the proposed 4th plan or is it a broad projection for a long range plan ?

† Indicates that the remarks or speeches have not been revised by the member concerned.

Sri ALUR HANUMANTHAPPA.—All these works are not included in the 4th Plan. We have estimates kept ready for implementation. We are awaiting funds from the Government of India.

ಶ್ರೀ ಸಿದ್ದಯ್ಯ ಕಾಶೀಮಠ.—ಈಗಾಗಲೇ ನಮ್ಮ ರಾಜ್ಯದಲ್ಲಿ ಎಷ್ಟು ತಾಲ್ಲೂಕುಗಳಲ್ಲಿ ಈ ರೀತಿ ಮಾಸ್ಟರ್ ಪ್ಲಾನ್ ಮಾಡಿದ್ದೀರಿ ?

ಶ್ರೀ ಆಲೂರು ಹನುಮಂತಪ್ಪ.—ಎರಾ್ಲ ತಾಲ್ಲೂಕುಗಳಲ್ಲಿ ಪ್ರಿಲಿಮಿನರಿ ಸರ್ವೇಯಾಗಿದೆ. ಇದರ ಒಂದು ಲಸ್ಟ್ ತಯಾರಾ್ಮಡಿದೆ. ಇಡೀ ದೇಶದಲ್ಲಿ 16,800 ಕೆಲಸಗಳಾಗಬೇಕಾಗಿದೆ. 3,79,000 ಎಕರೆ ಜಮೀನು ನೀರಾವರಿಯಾಗಬೇಕಾಗಿದೆ. 3,64,000 ಎಕರೆ ನೀರಾವರಿ ಮಾಡುವುದಕ್ಕೆ ಪರಿಶೀಲನೆ ಮಾಡಿದೆ. ಈ ಬೃಹತ್ ಯೋಜನೆಗೆ 80 ಕೋಟಿ ರೂಪಾಯಿ ಅಂದಾಜಾಗಿದೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ವರ್ಷದಲ್ಲಿ ಯಾವ ಕೆಲಸ ಮೊದಲು ತೆಗೆದುಕೊಳ್ಳಬೇಕು ಎನ್ನುವುದಕ್ಕೆ ಒಂದು ಪ್ರಾಯಾರಿಟಿ ಲಸ್ಟ್ ಮಾಡಲಾಗಿದೆಯೇ ?

ಶ್ರೀ ಆಲೂರು ಹನುಮಂತಪ್ಪ.—ಮಾಸ್ಟರ್ ಪ್ಲಾನ್ ಬಗ್ಗೆ ಸದಸ್ಯರಿಗೆ ಸ್ವಲ್ಪ ಕನ್‌ಫ್ಯೂಜನ್ ಇದ ಹಾಗೆ ಕಾಣುತ್ತದೆ. ಇದರ ಬಗ್ಗೆ ಸ್ವಲ್ಪ ವಿವರ ಹೇಳಿದರೆ ಎಲ್ಲರಿಗೂ ಸ್ಪಷ್ಟವಾಗಿ ತಿಳಿಯುತ್ತದೆ. ಸರಕಾರದ ನೀತಿ ಏನಿದೆ ಎನ್ನುವುದನ್ನು ಕಳೆದ ಬಜೆಟ್ ಅಧಿವೇಶನದಲ್ಲಿ ಸ್ಪಷ್ಟಪಡಿಸಿದ್ದೇವೆ. ನಮ್ಮ ಮೆರ್ಜ್ಯೆವದಿಂದ ನಮ್ಮ ರಾಜ್ಯಕ್ಕೆ ಸಾಕಷ್ಟು ನೀರು ದೊರೆಯಲಿಲ್ಲ. ಇದುವರೆಗೆ ನಮಗೆ ದೊರೆತ ನೀರಿನ ಪಾಲಿನಲ್ಲಿ ಶೇಕಡ 28-30ರಷ್ಟು ಕೂಡ ನೀರಾವರಿಗೆ ಉಪಯೋಗಿಸಿರುವುದಿಲ್ಲ. ಇನ್ನು ಮುಂದೆ ಆದಷ್ಟು ಮಟ್ಟಿಗೆ ಹೆಚ್ಚು ಗಮನ ಇರಿಗೇಷನ್ನಿಗೆ ಕೊಡಬೇಕೆಂದು ಇದೆ. ಮೈನರ್ ಇರಿಗೇಷನ್ ಬಗ್ಗೆ ಪ್ಲಾನು ಸರ್ವೇ ಮಾಡಿ ಬ್ಲೂ ಪ್ರಿಂಟ್ ತಯಾರಾಗಿದೆ. ಮೀಡಿಯಂ ಮತ್ತು ಮೇಜರ್ ಇರಿಗೇಶನ್ ಬಗ್ಗೆ ಸಹ ಬ್ಲೂ ಪ್ರಿಂಟ್ ತಯಾರಾಗಿದೆ. ಈ ಕೆಲಸಗಳಿಗೆ ದುಡ್ಡು ಬೇಕಾಗಿದೆ. ದುಡ್ಡು ಬಂದಾಗ್ಗೆ ಇನ್‌ವೆಸ್ಟಿಗೇಶನ್ ಮಾಡುವುದಕ್ಕೆ ಸಾಕಷ್ಟು ಟೈಂ ಇರುವುದಿಲ್ಲ ಇದಲ್ಲದೆ ನೀರು ದೊರೆಯುವುದು ಮುಖ್ಯ. ಸ್ಕೀಂ ರೆಡಿ ಮಾಡಿ ಇಟ್ಟುಕೊಂಡಿರಬೇಕಾಗುತ್ತದೆ. ಇಂಥ ಕೆಲಸ ಮಾಡಬೇಕಾಗಿದೆ ಎಂದು ಹೇಳುವುದಕ್ಕೆ ಮಾಸ್ಟರ್ ಪ್ಲಾನ್ ಮಾಡುತ್ತಾ ಇದ್ದೇವೆ. ಪ್ರತ್ಯೇಕವಾದ ಸಿಬ್ಬಂದಿ ಇಟ್ಟುಕೊಂಡು ಇನ್‌ವೆಸ್ಟಿಗೇಶನ್ ಮಾಡುತ್ತಾ ಇದ್ದೇವೆ. ನಮಗೆ ದುಡ್ಡು ಎಂದಂತೆ ಇವುಗಳನ್ನು ತೆಗೆದುಕೊಳ್ಳುತ್ತೇವೆ. ಈ ಮಾಸ್ಟರ್ ಪ್ಲಾನ್ ನಾಲ್ಕನೇ ಯೋಜನೆಯಲ್ಲಿ ಸಹ ಸೇರಿದೆ. ಮುಂದಿನ ವರ್ಷ ಆದನ್ನು ತೆಗೆದುಕೊಳ್ಳುತ್ತೇವೆ. ಆದರೆ ಯಾವ ಯಾವ ಕೆಲಸ ಇದರಲ್ಲಿ ಸೇರಿನವಾಗುವುದು ಎನ್ನುವುದನ್ನು ಈಗ ಹೇಳುವುದಕ್ಕೆ ಸಾಧ್ಯವಿಲ್ಲ.

ಶ್ರೀ ಎಚ್. ಡಿ. ದೇವೇಗೌಡ.—ಈ ಮಾಸ್ಟರ್ ಪ್ಲಾನ್ ವಿಚಾರದಲ್ಲಿ ಟೆಕ್ನಿಕಲ್ ಬೇಸಿಸ್ ಇದ್ದ ಹಾಗೆ ಕಾಣುವುದಿಲ್ಲ. ಪ್ರಿಲಿಮನರಿ ಸರ್ವೆ ಮಾಡಿರುವುದನ್ನು ಚೀಫ್ ಎಂಜಿನಿಯರ್ ಅವರು ಸೈನ್ ಮಾಡದೆ ಸೂಪರಿಂಟೆಂಡಿಂಗ್ ಎಂಜಿನಿಯರ್ ಅವರು ಸೈನ್ ಮಾಡಿರುವುದು ಸರಿಯಲ್ಲ ಅಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—ಹಾಗೆ ಹೇಳುವುದು ಸರಿಯಲ್ಲ. ಮಾಸ್ಟರ್ ಪ್ಲಾನ್ ಸರ್ವೇ ಮಾಡಿದ್ದೇವೆ. ಈ ವಿಷಯ ಮಾನ್ಯ ಸಭೆಗೆ ಹೇಳಿದ್ದೇನೆ. ಈಗ ಅದು ಸ್ಕ್ರುಟಿನಿಯಾಗುತ್ತಾ ಇದೆ. ಯಾವ ಯಾವುದು ಫೀಜಿಬಲ್ ಎನ್ನುವುದು ತೀರ್ಮಾನವಾಗಬೇಕಾಗಿದೆ.

(Sri H. D. Deve Gowda was found murmuring)

Mr. SPEAKER.—Is it for the benefit of other Members that he is ommenting ?

ಶ್ರೀ ಎಚ್. ಡಿ. ದೇವೇಗೌಡ.—ನತ್ಯಕ್ಕೆ ದೂರವಾದ ಉತ್ತರ ಮಾನ್ಯ ನಚಿವರು ಹೇಳಿದಾಗ್ಗೆ ನು ಮಾಡಬೇಕು ಸ್ವಾಮಿ ?

Mr. SPEAKER.—Why does the member make loud comments when he answer is given ?

Sri H. D. DEVE GOWDA.—I challenge the Minister to tell me whether the Chief Engineer has signed the Master Plan or not.

Mr. SPEAKER.—Don't try to get angry and talk on some thing lse. Please answer my question. Why is the member commenting o loudly ? Is it for the benefit of the Members or is it for anybody lse ? The Member should not comment like that.

ಶ್ರೀ ಎಚ್. ಡಿ. ದೇವೇಗೌಡ.—ಹಾಗಾದರೆ ನಾವು ಪ್ರಶ್ನೆ ಕೇಳಬೇಕಾಗಿಲ್ಲ ?

Mr. SPEAKER.—The Hon'ble Member may do whatever he likes. To whose benefit the Hon'ble Member is announcing that he is not putting question ?

ಶ್ರೀ ಎಚ್. ಡಿ. ದೇವೇಗೌಡ.—ಆ ರೀತಿ ಉತ್ತರ ಕೊಟ್ಟರೆ ಏನು ಮಾಡುವುದಕ್ಕಾಗುತ್ತದೆ ?

Mr. SPEAKER.—The Hon'ble Member is justifying his conduct. He goes off the point and tries to persist. There must be some adherence to the rules. Anything coming uppermost is let loose like that. That is how the habit is cultivated. I do not permit any member to make comments with a view to see that others are disturbed. What are the rules for then ?

Sri S. SIVAPPA.—The Hon'ble Minister was pleased to say...

Mr. SPEAKER.—Is it a supplementary ?

Sri S. SIVAPPA.—Yes Sir. The Hon'ble Minister was pleased to say that he does not know whether it would be possible to include these estimates in the fourth or fifth plan. May I know what purpose it will serve—what purpose the Master Plan will serve without being included in the Five-Year Plan ?

Sri ALUR HANUMANTHAPPA.—What the Hon'ble Minister said was that we have prepared the plan for the future years, whether it be the fourth or the fifth plan. We cannot definitely say at present we are going to take up 16,000 works within one or five years. We have got a list of more than 15,000 works costing 15 crorse. We are waiting for Central assistance for the execution of those works.

ಶ್ರೀ ಎಚ್. ಡಿ. ದೇವೇಗೌಡ.—ತಾವು ಮಾಸ್ಟರ್ ಪ್ಲಾನ್ ತಯಾರು ಮಾಡುವುದರ ಬಗ್ಗೆ ನೇರವಾದ ಒಂದು ಉತ್ತರವನ್ನು ಹೇಳಬೇಕು. ಮಾಸ್ಟರ್ ಪ್ಲಾನ್ ತಯಾರು ಮಾಡಿಸಿದ್ದರೂ ಕೂಡ ಈ 3 ವರ್ಷಗಳ ಕಾಲದಲ್ಲಿ ಮೈನರ್ ಇರಿಗೇಷನ್ ವರ್ಕ್ ಯಾವುದನ್ನೂ ತೆಗೆದುಕೊಳ್ಳದ ರೀತಿಯಲ್ಲಿ ನಂಬಂಧಪಟ್ಟ ಎಕ್ಸಿಕ್ಯೂಟಿವ್ ಇಂಜನಿಯರು ಆದೇಶ ಕಳುಹಿಸಿರುವುದು ನಿಜವೇ ? ಹಾಗಿದ್ದರೆ ಮಾಸ್ಟರ್‌ಪ್ಲಾನ್ ತಯಾರು ಮಾಡಿಸಿರುವುದರಲ್ಲಿ ಏನು ಉದ್ದೇಶ ಇದೆ ?

ಶ್ರೀ ಆಲೂರು ಹನುಮಂತಪ್ಪ.—ಮಾನ್ಯ ಸದಸ್ಯರು ವಿಷಯವನ್ನು ಸ್ವಲ್ಪ ಸರಿಯಾಗಿ ಅರ್ಥ ಮಾಡಿಕೊಂಡರೆ ಒಳ್ಳೆಯದು ಎಂದು ಕಾಣುತ್ತದೆ. ಸರ್ಕಾರದಿಂದ ಆದೇಶ ಕಳುಹಿಸಿರುವುದು ಈ ವರ್ಷಕ್ಕೆ ಹೊಸಕೆಲಸಗಳನ್ನು ಸ್ವಲ್ಪಮಟ್ಟಿಗೆ ನಿಲ್ಲಿಸಿ ಹಳೇ ಕೆಲಸಗಳನ್ನು ತೆಗೆದುಕೊಳ್ಳಿ ಎಂದು ಹೇಳಿದೆ. ಸುಮಾರು 12 ಕೋಟಿ ರೂಪಾಯಿಗಳನ್ನು ಖರ್ಚುಮಾಡಿದೆ. ಮುಂದಿನ ವರ್ಷ ಹಣ ಖರ್ಚು ಮಾಡಲಕ್ಕೆ ಸಾಧ್ಯವಿಲ್ಲ. ಕೇಂದ್ರಸರ್ಕಾರದಿಂದ ಹೆಚ್ಚು ಹಣ ಬಂದರೆ ಹೊಸ ಕೆಲಸಗಳನ್ನೂ ತೆಗೆದುಕೊಳ್ಳುತ್ತೇವೆ. ಆ ರೀತಿ ಯಾರು ಆದೇಶ ಕೊಟ್ಟಿದ್ದಾರೆ, ಯಾರು ಹೇಳಿದ್ದಾರೆ, ಹೊಸ ಕೆಲಸಗಳನ್ನು ತೆಗೆದುಕೊಳ್ಳಬಾರದು ಎಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಂಡರೆ ಒಳ್ಳೆಯದು ಎಂದು ಕಾಣುತ್ತದೆ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇದೇ ಸಭೆಯಲ್ಲಿ ಸುಮಾರು ಎರಡು ಮೂರು ಅಧಿವೇಶನಗಳಲ್ಲಿ ಯಾವ ಆದೇಶವನ್ನೂ ಕಳುಹಿಸಿಲ್ಲ. ಎಲ್ಲಾ ಕೆಲಸಗಳನ್ನೂ ತೆಗೆದುಕೊಳ್ಳಬೇಕೆಂದು ಹೇಳಿದ್ದು ತಮ್ಮ ಗಮನಕ್ಕೆ ಬಂದಿದೆಯೇ ? ಈ ತರಹ ಒಂದೊಂದು ಸಾರಿ ಒಂದೊಂದು ಅಭಿಪ್ರಾಯ ಹೇಳುವುದಕ್ಕೆ ಕಾರಣವೇನು ?

ಶ್ರೀ ಆಲೂರು ಹನುಮಂತಪ್ಪ.—ವರ್ಷದ ಪ್ರಾರಂಭದಲ್ಲಿ 2 ಕೋಟಿ 50 ಲಕ್ಷ ರೂಪಾಯಿ ಮಾತ್ರ ಇತ್ತು ಮತ್ತೆ ನಮಗೆ 1 ಕೋಟಿ 50 ಲಕ್ಷ ರೂಪಾಯಿ ಹೆಚ್ಚಾಗಿ ಹಣ ಬಂದದ್ದರಿಂದ ಹೆಚ್ಚು ಹಣ ಖರ್ಚುಮಾಡುವುದಕ್ಕೆ ಸಾಧ್ಯವಾಯಿತು. 4 ಕೋಟಿ ರೂಪಾಯಿಗಳನ್ನು ಈ ವರ್ಷ ಒಂದರಲ್ಲೇ ಮೈನರ್ ಇರಿಗೇಷನ್‌ಗೆ ಖರ್ಚುಮಾಡಿದ್ದೇವೆ ಎಂದಮೇಲೆ ತಾವು ಇದನ್ನು ಯೋಚನೆ ಮಾಡಬಹುದು.

ಶ್ರೀ ಟಿ. ಮಾದಯ್ಯಗೌಡ.—ಮಾಸ್ಟರ್ ಪ್ಲಾನ್ ಡಿವಿಜನ್ ಬೈ ಡಿವಿಜನ್ ತಯಾರಾಗುತ್ತಾ ಇದೆಯೇ, ಸಬ್‌ಡಿವಿಜನ್ ಬೈ ಸಬ್‌ಡಿವಿಜನ್ ತಯಾರಾಗುತ್ತಾ ಇದೆಯೇ, ಅಥವಾ ಎಲ್ಲಾ ಡಿವಿಜನ್‌ಗಳನ್ನೂ ಏಕ ಕಾಲದಲ್ಲಿ ತಯಾರುಮಾಡುತ್ತಾ ಇದ್ದೀರಾ ?

ಶ್ರೀ ಆಲೂರು ಹನುಮಂತಪ್ಪ.—ಇದನ್ನು ತಯಾರು ಮಾಡುವಾಗ ಎಲ್ಲಾ ತಾಲ್ಲೂಕುಗಳ ವಾಟರ್ ಪೊಟೆನ್ಸಿಯಲ್ ತೆಗೆದುಕೊಳ್ಳಲಾಗುತ್ತದೆ ಮತ್ತು ಅದರ ಅವಶ್ಯಕತೆ ಎಷ್ಟು ಎಂಬುದನ್ನೂ ಸಹ ನೋಡಿಕೊಂಡು ಮಾಸ್ಟರ್ ಪ್ಲಾನ್ ತಯಾರು ಮಾಡಿದ್ದೇವೆ.

Sri SANJEEVANATH AIKALA.—May I know whether pilot lift irrigation schemes are included in this Master Plan and if it is so, how many such lift irrigation schemes are included, and whether they are to be promoted by the Government or on a co-operative basis?

Mr. SPEAKER.—Is it a supplementary. There are too many ideas ? The member must put clear supplementary?

Sri SANJEEVANATH AIKALA.—May I know if lift irrigation schemes are included in the Master Plan and if so, how many have been included?

Mr. SPEAKER.—That was answered the other day.

Sri ALUR HANUMANTHAPPA.—We have sent the Lift Irrigation Project schemes to the Government of India for financial assistance. Estimates worth Rs. 1,65,00,000 have been submitted to the Central Government; they too want schemes to be implemented quickly to give quick results.

Mr. SPEAKER.—Only the other day on this identical matter, when the Chief Minister was answering, all these matters had come in. Simply because a chance is given, members must not repeat the same questions.

Sri SANJEEVANATH AIKALA.—I was not present, Sir.

Mr. SPEAKER.—It is no fault of mine or the Speaker.

ಶ್ರೀ ಜಿ. ಮಾದಯ್ಯಗೌಡ.—ಹೊಸ ನೀರಾವರೀ ಯೋಜನೆಗಳನ್ನು ಯಾವುದೂ ತೆಗೆದುಕೊಳ್ಳಬಾರದು ಎಂದು ಸ್ಥಳೀಯ ಅಧಿಕಾರಿಗಳಿಗೆ ಆದೇಶ ಕೊಟ್ಟಿರುವುದು ನಿಜವೇ ?

ಶ್ರೀ ಆಲೂರು ಹನುಮಂತಪ್ಪ.—ಹಾಲಿ ಇರತಕ್ಕ ಕಮಿಟೆಡ್ ವರ್ಕ್ಸ್ ಬೇಗ ಮುಗಿಸಿ ಅದರಿಂದ ಹೆಚ್ಚಿನ ಪ್ರತಿಫಲ ಕೂಡಲೇ ಪಡೆಯಬೇಕೆಂಬುದು ಮೊದಲನೆಯ ಉದ್ದೇಶ. ಎರಡನೆಯದು ಮಾನ್ಯ ಮಂತ್ರಿಗಳು ಹೇಳಿದರು ನಮ್ಮ ದೇಶದಲ್ಲಿ ನೀರಾವರಿ ಬಹಳ ಕಡಿಮೆಯಾಗಿದೆ, 7 ಭಾಗ ಇದೆ, ಅದನ್ನು 24ಕ್ಕೆ ಹೆಚ್ಚಿಸಬೇಕು ಅದಕ್ಕೆ ಹೊಸ ಕೆಲಸಗಳನ್ನು ತೆಗೆದುಕೊಳ್ಳಬೇಕಾಗುತ್ತದೆ ಅದಕ್ಕೆ ಕೇಂದ್ರದಿಂದ ಹಣ ತೆಗೆದುಕೊಳ್ಳುತ್ತೇವೆ ಎಂದು ಹೇಳುತ್ತಾ ಇದ್ದಾರೆ ಅದು ವಾಸ್ತವವಾದ ವಿಷಯ. ಅದಕ್ಕೆ ಪ್ರಯತ್ನ ಮಾಡುತ್ತಾ ಇದ್ದೇವೆ.

ಶ್ರೀ ಜಿ. ವಿ. ಗೌಡ.—1965-66ರಲ್ಲಿ ಈ ಮಾಸ್ಟರ್ ಪ್ಲಾನ್ ಕೆಳಗೆ ಸೇರಿರತಕ್ಕ ಕೆಲಸಗಳಲ್ಲಿ ಇನ್ನೂ ಎಷ್ಟು ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ಇದ್ದೀರಿ. 1500 ಕೆಲಸಗಳಿಗೆ ಎಸ್ಟಿಮೇಟ್ ತಯಾರಾಗಿದೆ ಎಂದು ಹೇಳಿದಿರಿ, ಎಷ್ಟು ಕೆಲಸ ತೆಗೆದುಕೊಳ್ಳಬೇಕೆಂಬುದು ಕೇಂದ್ರದ ಹಣಕಾಸಿನ ಮೇಲೆ ನಿಂತಿದೆ?

Mr. SPEAKER.—Now this Master Plan itself does not come under this question. On the Master Plan we had a dozen supplementaries. Now these supplementaries are having sub-supplementaries. Then a grievence is entertained that enough questions are not permitted. Are there no rules? Should they not be observed ?

ಶ್ರೀ ಬೈರಪ್ಪಾಜಿ.—ಸ್ವಾಮಿ, ಸರ್ಕಾರ ಮಾಸ್ಟರ್ ಪ್ಲಾನ್ ತಯಾರು ಮಾಡುತ್ತಾ ಇರುವುದು ಬಹಳ ಸ್ವಾಗತವಾದದ್ದು. ಆದರೂ ಕೂಡ ಹಣ ಇಲ್ಲದೇ ಈ ವರ್ಷ ಎಷ್ಟು ಕೆಲಸ ತೆಗೆದುಕೊಳ್ಳಬೇಕು. ಮುಂದಿನ ವರ್ಷ ಎಷ್ಟು ಕೆಲಸ ತೆಗೆದುಕೊಳ್ಳಬೇಕು ಎಂಬ ಸ್ಪಷ್ಟವಾದ ಅಭಿಪ್ರಾಯವನ್ನು ಇಟ್ಟುಕೊಳ್ಳದೆ ಮಾಸ್ಟರ್ ಪ್ಲಾನ್ ತಯಾರು ಮಾಡುತ್ತಾ ಇರುವುದರಲ್ಲಿ ಕಾಲ ಮತ್ತು ಹಣವನ್ನು ವ್ಯರ್ಥ ಮಾಡುತ್ತಾ ಇರುವುದು ಉಚಿತವೇ?

Mr. SPEAKER.—Was it not the question that was put? The Hon'ble Minister replied that they should be ready whenever the money comes.

ಶ್ರೀ ಬೈರಪ್ಪಾಜಿ.—ರೆಡಿಯಾಗಿ ಇಟ್ಟುಕೊಳ್ಳಬೇಕು ಎಂಬುದು ನಮ್ಮ ಅಭಿಪ್ರಾಯ ಮತ್ತು ದೇಶದ ಆಹಾರದ ಪರಿಸ್ಥಿತಿಯನ್ನು ಉತ್ತಮ ಪಡಿಸುವುದಕ್ಕೆ ಈ ಯೋಜನೆ ಸಹಕಾರಿಯಾಗುತ್ತದೆ, ಆದ್ದರಿಂದ ದುಡ್ಡು ಇಲ್ಲದೇ ಬರೀ ಡಿವಿಜನ್‌ಗಳನ್ನು ಏರ್ಪಾಡು ಮಾಡಿ ಎಸ್ಟಿಮೇಟುಗಳನ್ನು ಶೇಖರಣೆ ಮಾಡುವುದಕ್ಕೆ ಬದಲಾಗಿ ವರ್ಷೇ ವರ್ಷೇ ಅಷ್ಟಷ್ಟು ಕೆಲಸಗಳನ್ನು ತೆಗೆದುಕೊಂಡು ಅವನ್ನು ಕಾರ್ಯಗತ ಮಾಡುವುದಕ್ಕೆ ಆಗುವುದಿಲ್ಲವೇ?

ಅಧ್ಯಕ್ಷರು.—ಹಣ ಇಲ್ಲದೇ ಸ್ಕೀಂಗಳನ್ನು ತೆಗೆದುಕೊಳ್ಳಬೇಕೇ ?

ಶ್ರೀ ಬೈರಪ್ಪಾಜಿ.—ಹೆಚ್ಚು ಹಣ ಕೊಡಬೇಕೆಂದು ಕೇಂದ್ರ ಸರ್ಕಾರದವರಿಗೆ ಒತ್ತಾಯ ಮಾಡಬೇಕು. ಹಾಗೂ ಈ ಸರ್ಕಾರದ ಬಜೆಟ್‌ನಲ್ಲಿ ಈ ವರ್ಷಕ್ಕೆ ಒಂದು ಕೋಟಿ ರೂಪಾಯಿ ಇಟ್ಟಿರುವುದಕ್ಕೆ ಬದಲಾಗಿ ಬೇರೆ ಖರ್ಚುಗಳನ್ನು ಕಡಿಮೆ ಮಾಡಿ ಹೆಚ್ಚಿನ ಹಣವನ್ನು ಇದಕ್ಕೆ ಕೊಡಬೇಕಾದ್ದು ಸರ್ಕಾರದ ಕರ್ತವ್ಯವಲ್ಲವೇ?

Mr. SPEAKER.—Is it not a matter for the Budget Debate or the cut motions? Is it a supplementary ?

ಶ್ರೀ ಟಿ. ಮಾದಯ್ಯ ಗೌಡ.—ಇದು ಕಾನಕಾನಹಳ್ಳಿ ತಾಲ್ಲೂಕಿನಲ್ಲಿ ಮಾಸ್ಟರ್ ಪ್ಲಾನ್ ತಯಾರು ಮಾಡತಕ್ಕ ವಿಚಾರ. ಈ ಮಾಸ್ಟರ್ ಪ್ಲಾನ್ ತಯಾರು ಮಾಡುವುದಕ್ಕೆ ಎಷ್ಟು ಕಾಲ ಹಿಡಿಯಿತು? ಇದು ಯಾವಾಗ ಪ್ರಾರಂಭವಾಯಿತು ಇದುವರೆಗೂ ಏನೇನು ಕೆಲಸ ನಡೆದಿದೆ ಇನ್ನೂ ಏನೇನು ಕೆಲಸ ಬಾಕಿ ಇದೆ?

ಶ್ರೀ ಆಲೂರು ಹನುಮಂತಪ್ಪ.—ಈಗತಾನೆ ಹೇಳಿದೆ ಮಾಸ್ಟರ್ ಪ್ಲಾನ್ ಅನ್ನು ಸುಮಾರು ಎರಡು ವರ್ಷಗಳಿಂದ ತಯಾರು ಮಾಡುತ್ತಾ ಇದ್ದೇವೆ, ಕಾನಕಾನಹಳ್ಳಿ ತಾಲ್ಲೂಕಿಗೆ ಸಂಬಂಧಪಟ್ಟಂತೆ ಸುಮಾರು 120 ಕೆಲಸಗಳಿಗೆ ಅಂದಾಜು ಮಾಡಿದ್ದಾರೆ, 114 ಲಕ್ಷ ರೂಪಾಯಿಗಳು ಆಗುತ್ತವೆ, 11,578 ಎಕರೆ ನೀರಾವರಿಯಾಗುತ್ತದೆ.

ಶ್ರೀ ಎನ್. ನಂಜೇಗೌಡ.—ಸ್ಪಾಮಿ, ಪೆಂಡಿಂಗ್ ಕೆಲಸಗಳನ್ನು ಮುಗಿಸದೇ ಹೊಸ ಕೆಲಸಗಳನ್ನು ತೆಗೆದುಕೊಳ್ಳಕೂಡದು ಎಂದು ಹೇಳಿದ್ದೀರಿ. ಪೆಂಡಿಂಗ್ ವರ್ಕ್ಸ್‌ನಲ್ಲಿ ಅನೇಕ ವಿಧವಾದ ಸಮಸ್ಯೆಗಳು ಇದ್ದು ಕೆಲಸ ಶುರು ಮಾಡದೇ ಇರುವ ಸಂದರ್ಭ ಇರುವುದರಿಂದ ಈಗ ಅಲಾಟ್ ಮಾಡಿದ ಹಣ ಉಳಿಯತಕ್ಕ ಸಂದರ್ಭ ಇದೆ. ಆದ್ದರಿಂದ ಹೊಸ ಕೆಲಸಗಳನ್ನು ತೆಗೆದುಕೊಳ್ಳಲು ಏರ್ಪಾಡು ಮಾಡುತ್ತೀರಾ?

ಶ್ರೀ ಆಲೂರು ಹನುಮಂತಪ್ಪ.—ಹಾಲಿ ದುಡ್ಡು ಉಳಿಯತಕ್ಕ ಪರಿಸ್ಥಿತಿ ಇಲ್ಲ. 3ನೇ ಯೋಜನೆಗೆ 850 ಲಕ್ಷ ರೂಪಾಯಿ ಇತ್ತು. 3 ಕೋಟಿ ರೂಪಾಯಿ ಹೆಚ್ಚಿನ ಹಣ ಕೇಂದ್ರದಿಂದ ಬಂದಿದೆ, ಇನ್ನೂ ಹಣ ಬೇಕು.

ಶ್ರೀ ಟಿ. ಮಾದಯ್ಯ ಗೌಡ.—ಈಗ ಎರಡು ವರ್ಷಗಳಿಂದ ಒಂದು ತಾಲ್ಲೂಕಿನ ಮಾಸ್ಟರ್ ಪ್ಲಾನ್ ತಯಾರಾಗುತ್ತಿದೆ. ಹಾಗಾದರೆ ಉಳಿದ ತಾಲ್ಲೂಕಿನ ಕೆಲಸ ಯಾವಾಗ ಮುಗಿಸುವುದು ? ಕನಕಪುರ ತಾಲ್ಲೂಕಿನ ಪ್ಲಾನ್ ಯಾವಾಗ ಮುಗಿಯುವುದು ?

ಶ್ರೀ ಆಲೂರು ಹನುಮಂತಪ್ಪ.—ಮೈನರ್ ಇರಿಗೇಷನ್ ಇಲಾಖೆ ಬರೀ ಮಾಸ್ಟರ್ ಪ್ಲಾನ್ ಕೆಲಸವೊಂದನ್ನೇ ಮಾಡುತ್ತಿಲ್ಲ, ಟ್ಯಾಂಕ್ ಮ್ಯಾನ್ಯುಯಲ್, ಟ್ಯಾಂಕ್ ರಿಜಿಸ್ಟರ್ ಮುಂತಾದುವುಗಳ ಕೆಲಸವನ್ನೂ ಸಹ ಮಾಡಬೇಕಾಗುತ್ತದೆ. ಆದುದರಿಂದ ಸ್ವಲ್ಪ ನಿಧಾನವಾಗುತ್ತದೆ. ಮಾಸ್ಟರ್ ಪ್ಲಾನ್ ಪ್ರಿಲಿಮಿನರಿ ವರದಿಯಾಗಿದೆ, ಸ್ಕ್ರುಟಿನಿಮಾಡಿ ಪ್ಲಾನ್ ಸಿದ್ಧ ಮಾಡುತ್ತಿದ್ದಾರೆ.

ಶ್ರೀ ಟಿ. ಡಿ. ದೇವೇಂದ್ರಪ್ಪ.—ಮುಂದೆ ನಮ್ಮ ಮಕ್ಕಳು, ಮರಿಮಕ್ಕಳು ಇದರ ಫಲ ಅನುಭವಿಸಲೆಂದು ತಾನೆ ಮಾಸ್ಟರ್ ಪ್ಲಾನ್ ಮಾಡುತ್ತಿರುವುದು !

ಶ್ರೀ ಆಲೂರು ಹನುಮಂತಪ್ಪ.—ಜನತೆಯ ಉದ್ಧಾರವಾಗಬೇಕೆಂಬುದೇ ಸರಕಾರದ ಉದ್ದೇಶ.

ಶ್ರೀ ಕೆ. ಪಿ. ರೇವಣಸಿದ್ದಪ್ಪ.—ಇರುವ ಸಿಬ್ಬಂದಿಗೇ ಸಾಕಾದಷ್ಟು ಕೆಲಸವಿಲ್ಲದಿರುವಾಗ ಮಾಸ್ಟರ್‌ಪ್ಲಾನಿಗೇ ಬೇರೆ ಡಿವಿಜನ್ ಮಾಡಿದ್ದೀರಿ. ಹಣದ ಕೊರತೆ ಇರುವಾಗ ಇರುವ ಸಿಬ್ಬಂದಿಯಿಂದಲೇ ಮಾಸ್ಟರ್ ಪ್ಲಾನಿನ ಕೆಲಸ ಮಾಡಿಸುವುದಕ್ಕಾಗುತ್ತಿರಲಿಲ್ಲವೇ ?

ಶ್ರೀ ಆಲೂರು ಹನುಮಂತಪ್ಪ.—172 ತಾಲ್ಲೂಕುಗಳಲ್ಲಿ ಕೆಲಸಮಾಡಲು 7 ಜನ ಎಗ್ಸಿಕ್ಯುಟಿವ್ ಎಂಜಿನಿಯರುಗಳು, 24 ಅಸಿಸ್ಟೆಂಟ್ಸ್ ಎಂಜಿನಿಯರುಗಳು ಮತ್ತು ಅವರಿಗೆ ತಕ್ಕ ಸಿಬ್ಬಂದಿಯನ್ನೇನು ನೇಮಕ ಮಾಡಿದೆ ಆ ಸಿಬ್ಬಂದಿ ಮೂಲೆಮೂಲೆಗೆ ಹೋಗಿ ಎಲ್ಲವನ್ನೂ ಪರಿಶೀಲಿಸಿ ತಕ್ಕ ಕಾರ್ಯಕ್ರಮ ಕೈಕೊಳ್ಳಬೇಕು. ಅವರಿಗೆ ಕೆಲಸವಿಲ್ಲದೆ ಸಂಬಳ ಕೊಡಬೇಕೆಂಬ ಉದ್ದೇಶ ಸರಕಾರಕ್ಕಿಲ್ಲ. ಇನ್ನೂ 10 ವರ್ಷಗಳವರೆಗೆ ಮಾಡುವಷ್ಟು ಕೆಲಸವಿದೆ.